Azadi Ka Amrit Mahotsav

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001**

ಸಂಖ್ಯೆ: ಶಿ.ವ.ಕೋಶ.ಸಾ.ವ/01/2022-23 ದಿನಾಂಕ: 30/01/2023

**: ಅಧಿಕೃತ ಜ್ಞಾಪನ :**

**ವಿಷಯ:** 2022-23ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢ ಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರಗಳ ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ಕ್ರಮಗಳ ಮುಂದುವರಿಕೆ ಮತ್ತು ವರ್ಗಾವಣೆಗೆ ಅರ್ಜಿಸಲ್ಲಿಸುವ ಅವಧಿಯನ್ನು ವಿಸ್ತರಿಸಿರುವ ಬಗ್ಗೆ:

**ಉಲ್ಲೇಖ:** 1. ಈ ಕಛೇರಿಯಿಂದ ಹೊರಡಿಸಲಾಗಿರುವ ವರ್ಗಾವಣಾ ಅಧಿಸೂಚನೆ ದಿನಾಂಕ: 26/12/2023. ಮತ್ತು 11/1/2023

2. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 24/01/2023.

---*****---

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ-2020 [2020ರ ಕರ್ನಾಟಕ ಅಧಿನಿಯಮ ಸಂಖ್ಯೆ:04] ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು-2020ರ ನಿಯಮಗಳಂತೆ, ಹಾಗೂ ವರ್ಗಾವಣಾ ತಿದ್ದುಪಡಿ ಕಾಯ್ದೆ ಮತ್ತು ನಿಯಮ-2022ರ ಪ್ರಕಾರ ಉಲ್ಲೇಖಿತ-1ರಲ್ಲಿ ಈಗಾಗಲೇ ಮಾರ್ಗಸೂಚಿ ಸಹಿತ ವರ್ಗಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಕೆಲವು ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿತ್ತು ಶಿಕ್ಷಕರುಗಳು/ಕ್ಷೇತ್ರಶಿಕ್ಷಣಾಧಿಕಾರಿಗಳು ಸೇವಾ ಮಾಹಿತಿಯನ್ನು ಇ.ಇ.ಡಿ.ಎಸ್ ತಂತ್ರಾಂಶದಲ್ಲಿ ನಿಗದಿತ ಕಾಲಾವಕಾಶದೊಳಗೆ ಇಂದೀಕರಿಸದಿರುವುದರಿಂದ ಆಗಿರುವ ಲೋಪದಿಂದಾಗಿ ಸಮಸ್ಯೆ ಉದ್ಭವವಾಗಿರುತ್ತದೆ. ಪ್ರಸ್ತುತ ಸಮಸ್ಯೆಯನ್ನು ಇತ್ಯರ್ಥಪಡಿಸಿ ಹೆಚ್ಚುವರಿ ಪ್ರಕ್ರಿಯೆಯನ್ನು ಮುಂದುವರೆಸಲು ಕ್ರಮಕೈಗೊಳ್ಳಲಾಗುವುದು. ಆದ್ದರಿಂದ ಕೆಳಕಂಡಂತೆ ದಿನಾಂಕಗಳನ್ನು ಮರು ನಿಗಧಿಪಡಿಸಲಾಗಿದೆ. ರಾಜ್ಯದ ಎಲ್ಲಾ ಶಿಕ್ಷಕರು ಮತ್ತು ಸಕ್ಷಮ ವರ್ಗಾವಣಾ ಪ್ರಾಧಿಕಾರಿಗಳು ಹಾಗೂ ಅನುಷ್ಠಾನಾಧಿಕಾರಿಗಳು ಈ ಪತ್ರದೊಂದಿಗೆ ನೀಡಲಾಗಿರುವ ಸೂಚನೆ/ ಮಾರ್ಗಸೂಚಿ ಅಂಶಗಳನ್ನು ಕಡ್ಡಾಯವಾಗಿ ಓದಿಕೊಳ್ಳತಕ್ಕದ್ದು, ಅದರಂತೆ ಕಾರ್ಯ ನಿರ್ವಹಿಸಲು ತಿಳಿಸಿದೆ.

**ಪ್ರಸಕ್ತ ಸಾಲಿನ ಶಿಕ್ಷಕರ ವರ್ಗಾವಣಾ ಪ್ರಕ್ರಿಯೆಗಳು ಸ್ಥಗಿತಗೊಂಡಿರುವುದಿಲ್ಲ ಮುಂದುವರೆಯುತ್ತವೆ. ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ದಿನಾಂಕ: 30/01/2023ರವರೆಗೆ ನಿಗಧಿಪಡಿಸಲಾಗಿತ್ತು. ಆಡಳಿತಾತ್ಮಕ ಹಿತದೃಷ್ಟಿಯಿಂದ ವರ್ಗಾವಣೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಅಂತಿಮವಾಗಿ <u>ದಿನಾಂಕ: 04/03/2022</u> ರವರೆಗೆ ವಿಸ್ತರಿಸಿದೆ.**

**ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ಪ್ರಕ್ರಿಯೆ ಕುರಿತಂತೆ ಅಂತಿಮ ಪೂರ್ವಭಾವಿ ಕ್ರಮಗಳು.**

| ಕ್ರ ಸ | ವಿವರ | ವೃಂದ | | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|---|
| | ವರ್ಗಾವಣೆ ವಿಧ | ಪ್ರಾಥಮಿಕ ಶಿಕ್ಷಕರ ವೃಂದ | ಪ್ರೌಢಶಾಲಾ ಶಿಕ್ಷಕರ ವೃಂದ | |
| 1 | ಇ.ಇ.ಡಿ.ಎಸ್ ತಂತ್ರಾಂಶದಲ್ಲಿ ಶಿಕ್ಷಕರ ಸೇವಾ ಮಾಹಿತಿಯನ್ನು ಇಂದೀಕರಿಸಲು ನೀಡಿರುವ ಅಂತಿಮ ಕಾಲಾವಧಿ | 30/01/2023 ರಿಂದ 04/02/2023 | | ಶಿಕ್ಷಕರುಗಳು ಖುದ್ದಾಗಿ ಪೂರಕ ದಾಖಲೆಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು |
| 2 | ಎಲ್ಲಾ ಶಿಕ್ಷಕರು ಆದ್ಯತೆ ಅಥವಾ ವಿನಾಯಿತಿಗೆ ನಿಗಧಿಪಡಿಸಿದ ದಾಖಲೆಗಳನ್ನು ವರ್ಗಾವಣಾ ತಂತ್ರಾಂಶದಲ್ಲಿ ಇಂದೀಕರಿಸಲು ಅಥವಾ ಸರಿಪಡಿಸಲು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಮೂಲ ಪ್ರಮಾಣ ಪತ್ರವನ್ನು/ದಾಖಲೆಗಳನ್ನು ಖುದ್ದಾಗಿ ಸಲ್ಲಿಸಲು ನಿಗಧಿಪಡಿಸಿದ ಅಂತಿಮ ಕಾಲಾವಧಿ | 06/02/2023 ರಿಂದ 08/02/2023 | | |
| 3 | ಶಿಕ್ಷಕರು ಸಲ್ಲಿಸಿರುವ ವೈದ್ಯಕೀಯ ಪ್ರಮಾಣ ಪತ್ರಗಳ ಸೈಜತೆ ಮರು ಪರಿಶೀಲನೆ ಸೇರಿದಂತೆ ಶಿಕ್ಷಕರು ಸಲ್ಲಿಸಿರುವ ಆದ್ಯತೆ ಅಥವಾ ವಿನಾಯಿತಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಪರಿಶೀಲಿಸಿ ತಂತ್ರಾಂಶದಲ್ಲಿ ದೃಢೀಕರಿಸಿ ಅನುಮೋದಿಸಲು ಅಥವಾ ತಿರಸ್ಕರಿಸಲು ನಿಗಧಿಪಡಿಸಿರುವ ಅವಧಿ | 09/02/2023 ರಿಂದ 10/02/2023 | | ಸಂಬಂಧಿಸಿದ ವ್ಯಾಪ್ತಿಯ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು |

30/1/23

30/1/2023

ಹೆಚ್ಚುವರಿ ಪ್ರಕ್ರಿಯೆಯ ಹಾಗೂ ಕೋರಿಕೆ/ಪರಸ್ಪರ ವರ್ಗಾವಣೆ ಕುರಿತಂತೆ ವಿಸ್ತೃತವಾದ ವೇಳಾಪಟ್ಟಿಯನ್ನು ನಂತರದಲ್ಲಿ ಪ್ರಕಟಿಸಲಾಗುವುದು. ಉಳಿದಂತೆ ದಿನಾಂಕ: 26/12/2022 ರಲ್ಲಿ ಹೊರಡಿಸಲಾದ ಎಲ್ಲಾ ಮಾರ್ಗಸೂಚಿ ಅಂಶಗಳು ಮಾತ್ರ ಯಥಾವತ್ತಾಗಿ ಮುಂದುವರೆಯುತ್ತದೆ.

**ಶಿಕ್ಷಕರುಗಳಿಗೆ ಸೂಚನೆಗಳು :**

1. ಶಿಕ್ಷಕರುಗಳು ಇ.ಇ.ಡಿ.ಎಸ್ ನಲ್ಲಿ ದಾಖಲಿಸಿರುವ ಮಾಹಿತಿಯ ಆಧಾರದ ಮೇಲೆ ಹೆಚ್ಚುವರಿ ಮತ್ತು ಕೋರಿಕೆ ವರ್ಗಾವಣೆಗೆ ಪರಿಗಣಿಸಲಾಗುತ್ತದೆ. ಆದ್ದರಿಂದ ಎಲ್ಲಾ ಶಿಕ್ಷಕರುಗಳು ಮತ್ತೊಮ್ಮೆ ತಮ್ಮ ಸೇವಾ ವಿವರಗಳನ್ನು ಇ.ಇ.ಡಿ.ಎಸ್ ನಲ್ಲಿ ಕಡ್ಡಾಯವಾಗಿ ಪರಿಶೀಲಿಸಿಕೊಳ್ಳಲು ದಿನಾಂಕ: 04/02/2023ರ ಸಂಜೆ 5-30 ರವರೆಗೆ ಅಂತಿಮ ಕಾಲಾವಕಾಶವನ್ನು ನೀಡಲಾಗಿದೆ.
2. ಬಹುತೇಕ ಶಿಕ್ಷಕರು ಖಾಯಂ ಸೇವಾಪೂರ್ವ ಅವಧಿ ಘೋಷಣೆ, ಸೇವೆಗೆ ಸೇರಿದ ದಿನಾಂಕ, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವೃಂದ, ಬೋದನಾ ಮಾಧ್ಯಮ/ ವಿಷಯ, ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯ ಡೈಸ್ ಸಂಖ್ಯೆ/ಶಾಲೆಯ ವಿವರ, ವಲಯ, ಶಿಕ್ಷಕರ ಸೇವಾ ವಿವರ ಇತ್ಯಾದಿ ವಿವರಗಳನ್ನು ಇಂದೀಕರಿಸಿರುವುದಿಲ್ಲ ಇದನ್ನು ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
3. ಅಂತಿಮ ದಿನಾಂಕದ ನಂತರ ಇ.ಇ.ಡಿ.ಎಸ್‌ನಲ್ಲಿ ಯಾವುದೇ ತಿದ್ದುಪಡಿಗೆ ಅವಕಾಶವಿರುವುದಿಲ್ಲ. ನಿಗಧಿತ ಅವಧಿ ಮೀರಿದ ನಂತರ ತಿದ್ದುಪಡಿ ಕೋರಿ ಮನವಿ ಸಲ್ಲಿಸಿದಲ್ಲಿ ಅಂತಹ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಕೆಲವು ಶಿಕ್ಷಕರು ಸಮುಚಿತ ಮಾರ್ಗದಲ್ಲಿ ಮನವಿ ಸಲ್ಲಿಸದೇ ನೇರವಾಗಿ ಆಯುಕ್ತರು/ನಿರ್ದೇಶಕರಿಗೆ ಪತ್ರ ಬರೆಯುತ್ತಿರುವ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ. ಇದು ಶಿಷ್ಟಾಚಾರದ ಉಲ್ಲಂಘನೆಯಾಗುವುದರಿಂದ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಥವಾ ಮನವಿ ಇದ್ದಲ್ಲಿ ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಗಳು ಅಥವಾ ಉಪನಿರ್ದೇಶಕರ ಮುಖಾಂತರ ಪ್ರಸ್ತಾವನೆ ಸಲ್ಲಿಸುವುದು. ತಪ್ಪಿದಲ್ಲಿ ಅಂತಹಾ ಶಿಕ್ಷಕರ ವಿರುದ್ಧ ಕರ್ತವ್ಯಲೋಪದ ಆರೋಪದಡಿಯಲ್ಲಿ ಕರ್ನಾಟಕ ನಾಗರೀಕ ಸೇವಾ ನಡತೆ (ನಿಯಮ)-2021ರ ನಿಯಮ-29ರ ಪ್ರಕಾರ ಶಿಸ್ತು ಕ್ರಮಕ್ಕೆ ಗುರುತುಪಡಿಸಲಾಗುವುದು.
5. ಶಿಕ್ಷಕರುಗಳು ಇ.ಇ.ಡಿ.ಎಸ್ ನಲ್ಲಿ ತಪ್ಪಾಗಿ ಮಾಹಿತಿ ನಮೂದಿಸಿ ಮುಂದಿನ ದಿನಗಳಲ್ಲಿ ವೇಟೇಜ್ ಅಂಕಗಳು ಹಾಗೂ ಹೆಚ್ಚುವರಿಯಲ್ಲಿ ಅಥವಾ ಕೋರಿಕೆ ವರ್ಗವಣೆಯಲ್ಲಿ ಸಮಸ್ಯೆಯಾದಲ್ಲಿ ಅದಕ್ಕೆ ಸಂಬಂಧಪಟ್ಟ ಶಿಕ್ಷಕರುಗಳೇ ನೇರ ಹೊಣೆಗಾರರಾಗಿರುತ್ತಾರೆ.
6. ಈಗಾಗಲೇ ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ಪ್ರಕ್ರಿಯೆಯಲ್ಲಿ ಆಯಾ ಶಾಲೆಯಲ್ಲಿ ಶಿಕ್ಷಕರು ಹೆಚ್ಚುವರಿ ಪಟ್ಟಿಯಲ್ಲಿರಲಿ ಅಥವಾ ಪಟ್ಟಿಯಲ್ಲಿ ಇಲ್ಲದಿರಲಿ ಅಂತಹಾ ಎಲ್ಲಾ ಶಿಕ್ಷಕರು ಕಡ್ಡಾಯವಾಗಿ ಹೆಚ್ಚುವರಿಯಿಂದ ವಿನಾಯಿತಿ ಪಡೆಯಲು ಅಥವಾ ಆದ್ಯತೆಯನ್ನು ಕ್ಲೇಂ ಮಾಡಲು ಸೆಕ್ಷನ್ 10(1) ರಲ್ಲಿ ನಿಗಧಿಪಡಿಸಿರುವ ದಾಖಲೆಗಳನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ ಇಂದೀಕರಿಸಲು ಆಯಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಭೌತಿಕವಗಿ ಪೂರಕ ದಾಖಲೆಗಳನ್ನು ಒದಗಿಸುವುದು.

**ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಚನೆಗಳು:**

1. ಈಗಾಗಲೇ ಒಂದು ವರ್ಷದಿಂದ ಇ.ಇ.ಡಿ.ಎಸ್ ನಲ್ಲಿ ಮಾಹಿತಿಯನ್ನು ಇಂದೀಕರಿಸಲು ಸಾಕಷ್ಟು ಅವಕಾಶ ನೀಡಿದ್ದರೂ ಸಹಾ ಕ್ಷೇತ್ರಶಿಕ್ಷಣಾಧಿಕಾರಿಗಳು/ಡಿ.ಡಿ.ಒಗಳು ಸೂಕ್ತ ಕ್ರಮವಹಿಸದೇ ಇರುವ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ. ಇದು ಅಂತಿಮ ಅವಕಾಶವಾಗಿದ್ದು ಈಗಲೂ ತಂತ್ರಾಂಶದಲ್ಲಿ ಶಿಕ್ಷಕರ ವಿವರಗಳನ್ನು ಸರಿಪಡಿಸದಿದ್ದಲ್ಲಿ ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಗಳು/ ಡಿ.ಡಿ.ಒಗಳನ್ನೇ ನೇರಹೊಣೆಗಾರರನ್ನಾಗಿ ಮಾಡಲಾಗುವುದು.
2. ಶಿಕ್ಷಕರುಗಳು ವಿನಾಯಿತಿ/ಆದ್ಯತೆ ಕೋರಿ ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿ ಸೇವಾ ವಿವರಗಳನ್ನು ಸೇವಾವಹಿಯೊಂದಿಗೆ ತಾಳೆಮಾಡಿ ಸದರಿ ಆದ್ಯತೆಯ/ವಿನಾಯಿತಿಯ ಮೂಲ ದಾಖಲೆಗಳನ್ನು ದಿನಾಂಕ: 08/02/2023ರ ಒಳಗೆ ಕ್ಷೇತ್ರಶಿಕ್ಷಣಾಧಿಕಾರಿಗಳು/ ಡಿ.ಡಿ.ಒ ಗಳು ಪರಿಶೀಲಿಸಿ ಇಂದೀಕರಿಸಲು ತಿಳಿಸಿದೆ. ಸುಳ್ಳು ಮಾಹಿತಿ ನೀಡಿ ವಿನಾಯಿತಿ ಅಥವಾ ಆದ್ಯತೆ ಕ್ಲೇಂ ಮಾಡಿರುವುದು ಕಂಡುಬಂದಲ್ಲಿ ಅಂತಹಾ ಶಿಕ್ಷಕರ ವಿರುದ್ಧ ಇಲಾಖಾ ಶಿಸ್ತು ಕ್ರಮಗಳನ್ನು ಕೈಗೊಂಡು ಕಠಿಣ ದಂಡನೆಯನ್ನು ವಿಧಿಸುವುದು.

30/1/23

30/01/2023

4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರುಗಿ ಮತ್ತು ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ.
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು ರವರಿಗೆ.
10. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-01 ರವರಿಗೆ ಪ್ರತಿಯನ್ನು ರವಾನಿಸುತ್ತಾ, ಉದ್ದೇಶಿತ ವರ್ಗಾವಣೆ ಪ್ರಕ್ರಿಯೆಗೆ "ತಂತ್ರಾಂಶವನ್ನು" ನಿಯಮಗಳಡಿ ಸಜ್ಜುಗೊಳಿಸಿ ಯಾವುದೇ ಲೋಪಗಳು ಉದ್ಭವಿಸದಂತೆ, ಸೂಕ್ತ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
11. ಹಿರಿಯ ಸಹಾಯಕ ನಿರ್ದೇಶಕರು, ಇ.ಇ.ಡಿ.ಎಸ್ ಘಟಕ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
13. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
14. ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಣೆಗಾಗಿ ಇ-ಆಡಳಿತ ಶಾಖೆಗೆ.
15. ಕಛೇರಿ ಪ್ರತಿ.

3. ಇ.ಇ.ಡಿ.ಎಸ್ ನಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿ/ದಾಖಲೆಗಳು ಸರಿಯಾಗಿದೆ ಎಂಬ ಬಗ್ಗೆ ತಮ್ಮ ವ್ಯಾಪ್ತಿಯ ಶಿಕ್ಷಕರಿಂದ ದೃಢೀಕರಣ ಪಡೆದು ಕಡತದಲ್ಲಿರಿಸುವುದು.
4. ಹೆಚ್ಚುವರಿಯಾದ ಶಿಕ್ಷಕರು ವಿನಾಯಿತಿಗೆ/ಆದ್ಯತೆ ಕೋರಿ ಸಲ್ಲಿಸಿರುವ ದಾಖಲೆಗಳು ವರ್ಗಾವಣಾ ಕಾಯ್ದೆ-2020ರ ಸೆಕ್ಷನ್ 10(1)ರಲ್ಲಿ ನಿಗಧಿಪಡಿಸಿರುವ ಸಕ್ಷಮ ಪ್ರಾಧಿಕಾರದ ಮೂಲಕ ಪ್ರಮಾಣ ಪತ್ರ ಸಲ್ಲಿಸಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಖಚಿತಪಡಿಸಿಕೊಳ್ಳುವುದು. ಒಂದು ವೇಳೆ ನಿಗಧಿತ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದಿಲ್ಲವಾದಲ್ಲಿ ಅಂತಹಾ ಶಿಕ್ಷಕರ ಅರ್ಜಿಯನ್ನು ತಿರಸ್ಕರಿಸಿ ಕೂಡಲೆ ಸೂಕ್ತ ಹಿಂಬರಹ ನೀಡಿ ಶಿಕ್ಷಕರ ಸಹಿ ಪಡೆಯುವುದು.
5. ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಈಗಾಗಲೇ ತಿಳಿಸಿರುವ ಮಾರಣಾಂತಿಕ ಖಾಯಿಲೆಗಳನ್ನು ಮಾತ್ರ ಅಂಗೀಕರಿಸುವುದು ಇಲ್ಲವಾದಲ್ಲಿ ಅವುಗಳನ್ನು ತಿರಸ್ಕರಿಸುವುದು.
6. ಒಂದು ವೇಳೆ ಶಿಕ್ಷಕರು ಸಲ್ಲಿಸಿರುವ ದಾಖಲೆಗಳು ನಿಯಮಗಳಿಗೆ ವ್ಯತಿರಿಕ್ತವಾಗಿದ್ದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಶಿಕ್ಷಕರುಗಳಿಗೆ ಕಾರಣ ಸಹಿತ ಹಿಂಬರಹ ನೀಡುವುದು. ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು/ ಡಿ.ಡಿ.ಒಗಳು ವರ್ಗಾವಣಾ ಕಾಯ್ದೆ/ ನಿಯಮ/ ಮಾರ್ಗಸೂಚಿಗಳನ್ನು ಮತ್ತೊಮ್ಮೆ ಮನನ ಮಾಡಿಕೊಂಡು ನಿಯಮಾನುಸಾರ ಕ್ರಮವಹಿಸತಕ್ಕದ್ದು. ಅನಗತ್ಯವಾಗಿ ಈ ಕಛೇರಿ ಪತ್ರ ಬರೆದು ಕಾಲಹರಣ ಮಾಡುವಂತಿಲ್ಲ.
7. ಅಂಗವಿಕಲ ಅಥವಾ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವ ಶಿಕ್ಷಕರು ಹೆಚ್ಚುವರಿಯಿಂದ ವಿನಾಯಿತಿಗೆ ಒಳಪಡಲು ಶಿಕ್ಷಕರು ಅಥವಾ ಅವರ ಅವಲಂಭಿತರೇ ಎಂಬ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸಿ ಖಚಿತಪಡಿಸಿಕೊಂಡು ನಂತರವೇ ಅಂತಹಾ ಶಿಕ್ಷಕರು ಹೆಚ್ಚುವರಿಯಿಂದ ವಿನಾಯಿತಿಗೆ ಅರ್ಹರಿರುತ್ತಾರೆ. ತಮ್ಮ ಅಥಾವ ತಮ್ಮ ಅಧೀನ ಸಿಬ್ಬಂಧಿಗಳು ತಪ್ಪಾಗಿ ವಿನಾಯಿತಿಗೆ ಅಥವಾ ಆದ್ಯತೆಗೆ ಅನುಮೋದಿಸಿದಲ್ಲಿ ಹೆಚ್ಚುವರಿಯಲ್ಲಿ ಏನಾದರೂ ಲೋಪ ಅಥವಾ ದೂರು ಸಲ್ಲಿಕೆಯಾದಲ್ಲಿ ಅಂತಹಾ ಸಕ್ಷಮ ಪ್ರಾಧಿಕಾರಿಗಳು ಮತ್ತು ಸಿಬ್ಬಂಧಿಗಳ ವಿರುದ್ಧ ಕರ್ತವ್ಯಲೋಪದ ಆರೋಪದಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಇದೇ ಮಾದರಿಯು ಎಲ್ಲಾ ವಿಧದ ವಿನಾಯಿತಿ/ಆದ್ಯತೆಗೂ ಅನ್ವಯವಾಗುತ್ತದೆ.
8. ಹೆಚ್ಚುವರಿ ಪ್ರಕ್ರಿಯೆಯು ಅತ್ಯಂತ ಪಾರದರ್ಶಕವಾಗಿ ಯಾವುದೇ ಲೋಪ ದೋಶಗಳಿಗೆ ಆಸ್ಪದ ನೀಡದೇ ಎಲ್ಲಾ ವಿಧದ ಪ್ರಕ್ರಿಯೆಗಳು ಯಶಸ್ವಿಯಾಗಿ ನಡೆಯಲು ಅಗತ್ಯ ಕ್ರಮವಹಿಸಲು ಸೂಚಿಸಿದೆ.

30/01/20..

(ಡಾ|| ವಿಶಾಲ್. ಆರ್) ಭಾ.ಆ.ಸೇ
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ, ಅಗತ್ಯ ಕ್ರಮಕ್ಕಾಗಿ

1) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ
2) ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3) ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಗುಲ್ಬರ್ಗಾ/ಧಾರವಾಡ
4) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು /ಬೆಳಗಾವಿ/ಕಲಬುರಗಿ
5) ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
6) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು [ಆಡಳಿತ] ರವರ ಮೂಲಕ)

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರ ಆದ್ಯ ಅವಗಾಹನೆಗಾಗಿ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ .
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.